



# ಖಳನಾಯಕಿ ಆದರೂ ನಿರಾಕರಿಸಲಾರೆ

## ಕಾವ್ಯಾ ಗೌಡ

◆ **ಕಥೆಯಲ್ಲಿ ಸ್ತ್ರೀಯರ ಕ್ರೌರ್ಯಕ್ಕೆ ನೀಡುವ ಪ್ರಾಮುಖ್ಯತೆ, ಕರುಣೆ ಅಥವಾ ಸೂಕ್ಷ್ಮ ಸಂವೇದನೆಗೆ ನೀಡುವುದಿಲ್ಲ ಎನ್ನುವ ಆರೋಪ ಇದೆಯಲ್ಲ ನೀವು ಏನು ಹೇಳುತ್ತೀರಿ?**

ಆ ಆರೋಪವನ್ನು ನಾನು ಒಪ್ಪುವುದಿಲ್ಲ. ಒಟ್ಟಾರೆ ಕಥೆಯ ಆಶಯ ಒಳಿತನ್ನೇ ಬಿಂಬಿಸುತ್ತದೆ. ಮಹಿಳೆ ತನ್ನ ಬದುಕಿನಲ್ಲಿ ಎಷ್ಟೆಲ್ಲ ಕಷ್ಟಪಡುತ್ತಾಳೆ. ತನ್ನ ಜೀವಿತಾವಧಿಯ ಕಾಲದ ಕುಲುಮೆಯಲ್ಲಿ ಬೆಂದಿರುತ್ತಾಳೆ. ತನ್ನ ಉಳಿವಿಗಾಗಿ ನಿರಂತರ ಹೋರಾಡಿರುತ್ತಾಳೆ. ಒಂಟಿ ಮಹಿಳೆಯೊಬ್ಬಳು ಹೇಗೆ ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಏನಾದರೂ ಮಾಡಬಲ್ಲಳು. ತನ್ನ ಜೀವನವನ್ನು ಸ್ವಾಭಿಮಾನದಿಂದ ನಡೆಸಬಲ್ಲಳು ಎನ್ನುವ ಸತ್ಯವೂ ಇರುತ್ತದೆ. ನಾನು ನಿರ್ವಹಿಸಿದ್ದ 'ರುಕ್ಕು' ಪಾತ್ರ ಅಂತಹ ಗುಣಧರ್ಮವನ್ನೇ ಒಳಗೊಂಡಿದೆ. ಸಶಕ್ತಳಾದ ಆಕೆ ಎಂತಹ ಸಂಕಷ್ಟದ ಸನ್ನಿವೇಶವನ್ನೂ ಸಮರ್ಥವಾಗಿ ಎದುರಿಸಬಲ್ಲಳು. ಈ ಪಾತ್ರದಿಂದಲೇ ನನಗೂ ಆ ಸತ್ಯ ಚೆನ್ನಾಗಿ ಅರ್ಥವಾಗಿದೆ. ಇಂತಹ ಹಲವಾರು ಉದಾಹರಣೆಗಳು ನಮ್ಮ ಮುಂದೆ ಇವೆ. ಎಲ್ಲರೂ ಒಂದೇ ರೀತಿ ಇರುವುದಿಲ್ಲ. ಸಮಾಜದಲ್ಲಿ ಒಳ್ಳೆಯವರೂ ಇರುತ್ತಾರೆ ಕೆಟ್ಟವರೂ ಇರುತ್ತಾರೆ. ಮಹಿಳೆಯರಲ್ಲೂ ಕೆಟ್ಟವರು ಇರುತ್ತಾರೆ. ಅದನ್ನೇ ಧಾರಾವಾಹಿಯ ಕಥೆಗಳೂ ಹೇಳುತ್ತವೆ. ಆದರೆ ಒಂದಿಷ್ಟು ನಾಟಕೀಯತೆ ಮತ್ತು ರಂಜನೀಯ ಸ್ಪರ್ಶ ಹೆಚ್ಚಾಗುತ್ತಿದೆ ಎಂದು ಅನೇಕರಿಗೆ ಅನ್ನಿಸಬಹುದು. ಅದೆಲ್ಲ ಮನೋರಂಜನೆಯ ಕಾರಣಕ್ಕೆ ಹಾಗೆ ಮಾಡಿರುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ.

◆ **ನಟಿಯಾಗಲು ಸವೆಸಿದ ಹಾದಿಯನ್ನು ಒಮ್ಮೆ ಹಿಂದಕ್ಕೆ ತಿರುಗಿ ನೋಡಿದರೆ...**

ಬಾಲ್ಯದಿಂದಲೂ ಹಲವು ವೃತ್ತಿ ಕನಸುಗಳು ನನ್ನಲ್ಲಿ ಅರಳಿದ್ದವು. ಯಾವುದೂ ಸ್ಥಿರವಾಗಿ ಇರುತ್ತಿರಲಿಲ್ಲ. ಒಮ್ಮೆ ಪೊಲೀಸ್ ಆಗಬೇಕು. ಲಾಯರ್ ಆಗಬೇಕು, ಡಾಕ್ಟರ್ ಆಗಬೇಕು ಎಂದೆಲ್ಲ ಅಂದುಕೊಂಡಿದ್ದೆ. ಹೀಗಿರುವಾಗ ಕಲೆ ಎನ್ನುವುದು ನನ್ನಲ್ಲಿ ಹೇಗೆ ಹುಟ್ಟಿತು ಎಂದು ತಿಳಿದುಕೊಳ್ಳುವ ಕುತೂಹಲ ನನಗೂ ಇದೆ. ನಟಿ ಆಗಬೇಕು ಎಂದು ಎಂದೂ ಅಂದುಕೊಂಡಿರಲಿಲ್ಲ. ಪಿಯುಸಿಯಲ್ಲಿ ಇದ್ದಾಗ ಆರ್‌ಜೆ ಆಗಬೇಕು ಎಂದು ಬಲವಾಗಿ ಅನ್ನಿಸಿತ್ತು. ಅದೇ ಸಂದರ್ಭದಲ್ಲಿ ಅದಕ್ಕಿಂತ ಜನಪ್ರಿಯತೆ ಟೀವಿ ನಿರೂಪಣೆಯಲ್ಲಿ ಹೆಚ್ಚು ಸಿಗುತ್ತದೆ ಎಂದು ಕೇಬಲ್ ಟೀವಿಗಳಿಗೆ ಪ್ರಯತ್ನ ಮಾಡಿದೆ. ಆಡಿಷನ್ ಇದ್ದಲ್ಲೆಲ್ಲ ಹೋಗುತ್ತಿದ್ದೆ. ಯಾವುದೇ ತಯಾರಿ ಇರುತ್ತಿರಲಿಲ್ಲ. ಅಲ್ಲಿ ಕೇಳಿದ್ದನ್ನು ತಿಳಿದಂತೆ ಮಾಡಿ ಬರ್ತಾ ಇದ್ದೆ. ಎರಡು ಮೂರು ಆಡಿಷನ್ ನಂತರ ನಾನು ಏಕೆ ಆಯ್ಕೆ ಆಗುತ್ತಿಲ್ಲ ಎಂದು ಯೋಚಿಸಿದೆ. ಅದಕ್ಕೆ ಸಿದ್ಧತೆ ಬೇಕು ಎಂದೆನಿಸಿ ಸ್ವಯಂ ತಾಲೀಮು ಆರಂಭಿಸಿದೆ. ಆ ನಂತರ ಅವಕಾಶವೂ ಸಿಕ್ಕವು. ಓದಿನ ಜೊತೆ ವಾರಾಂತ್ಯದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದೆ. ನಂತರ ಪ್ರಮುಖ ವಾಹಿನಿಗಳಲ್ಲಿ 'ಮಹಾಲಕ್ಷ್ಮಿ', 'ಹೆಣ್ಮಕ್ಕಳೇ ಸ್ಟ್ರಾಂಗು ಗುರು' 'ಅಮ್ಮ ಮಗಳು' ಶೋಗಳನ್ನು ನಿರೂಪಿಸಿದ್ದೇನೆ. ಫೇಸ್‌ಬುಕ್ ಮೂಲಕ ಸಿನಿಮಾದಲ್ಲಿ ನಟಿಸಲು ಒಂದು ಆಹ್ವಾನ ಬಂತು. ನನಗೆ ನಟನೆ ಬರುವುದಿಲ್ಲ ಎನ್ನುವ ಅಳುಕನ್ನು ತೋಡಿಕೊಂಡೆ. ಅವರ ಒತ್ತಾಯಕ್ಕೆ ನಟನೆಯನ್ನೂ ನೋಡೋಣ ಎಂದು ಒಪ್ಪಿದೆ. ನಾಲ್ಕೈದು ಸಿನಿಮಾಗಳಲ್ಲಿ ನಟಿಸಿದ್ದೇನೆ. ಎಲ್ಲವೂ ಪ್ರಧಾನ ಪಾತ್ರಗಳೆ. ಕಾರಣಾಂತರದಿಂದ ಅವು ಇನ್ನೂ ತೆರೆಕಂಡಿಲ್ಲ. ಸದ್ಯದಲ್ಲಿ ನನ್ನ ಮೊದಲ ಸಿನಿಮಾ 'ಆಡಿಸಿ ನೋಡು ಬೀಳಿಸಿ ನೋಡು' ತೆರೆ ಕಾಣುತ್ತದೆ. ಇದಕ್ಕೆ ಆಯ್ಕೆ ಆದಾಗ ನಿರ್ದೇಶಕರೆ 15 ದಿನ ಕಾರ್ಯಾಗಾರ ಮಾಡಿ ನನಗೆ ನಟನೆಯನ್ನು ಕಲಿಸಿದರು. ಅದರಿಂದ ನನಗೆ ಧಾರಾವಾಹಿ– ಕಿರು ಚಿತ್ರಗಳಲ್ಲಿ ನಟಿಸುವ ಅವಕಾಶಗಳು ಸಿಕ್ಕಿವೆ.

◆ **ಶಾಂತಂ ಪಾಪಂ ಹೇಗಿತ್ತು? ಮುಂದೆ ಖಳನಾಯಕಿಯಾಗಿ ನಟಿಸುವ ಅವಕಾಶ ಸಿಕ್ಕರೆ**

'ಶಾಂತಂ ಪಾಪಂ' ಭಿನ್ನ ರೀತಿಯ ಧಾರಾವಾಹಿ. ಇಲ್ಲಿ ಪಾತ್ರಧಾರಿಗಳು ಬದಲಾಗುತ್ತಾರೆ. ಕೆಲವೊಂದು ಕಂತುಗಳಲ್ಲಿ ಕೆಲವೊಂದು ಭಿನ್ನ ಪಾತ್ರ ಮತ್ತು ಸನ್ನಿವೇಶ ಬರುತ್ತವೆ. ನಾನೂ ಕೆಲವು ಸನ್ನಿವೇಶದಲ್ಲಿ ಮಾಡಿದ್ದೇನೆ. ಈಚೆಗೆ ಅದರ 'ಕಡಲೂರ ಕನಸುಗಳು' ಸಂಚಿಕೆಯಲ್ಲಿ ರುಕ್ಕು ಎನ್ನುವ ಪಾತ್ರವನ್ನು ಮಾಡಿದ್ದೇನೆ. ಅಲ್ಲಿ ಮೀನು ವ್ಯಾಪಾರಿಯಾದ ನನಗೆ ಕುಟುಂಬದ ಸಂಪೂರ್ಣ ಜವಾಬ್ದಾರಿ ಇತ್ತು. ಮೂವರು ಮಕ್ಕಳ ಜೊತೆ ಸಹೋದರಿಯರನ್ನೂ ಪೋಷಣೆ ಮಾಡಿದ್ದೆ.

ಯಾವುದೇ ಪಾತ್ರ ಸಿಕ್ಕರು ಅದನ್ನು ನಾನು ನಿರಾಕರಿಸುವುದಿಲ್ಲ. ಕಥೆಯಲ್ಲಿ ಅದರ ಪ್ರಾಮುಖ್ಯತೆಯನ್ನು ನೋಡಿ ಒಪ್ಪಿಕೊಳ್ಳುತ್ತೇನೆ. ಖಳನಾಯಕಿ ಆದರೂ ಅಷ್ಟೆ. ಅದನ್ನು ಪಾತ್ರವಾಗಿಯೇ ನೋಡುತ್ತೇನೆ. ಅದಕ್ಕೆ ಬೇಕಾಗುವ ತಯಾರಿಯನ್ನು ಮಾಡಿಕೊಳ್ಳುತ್ತೇನೆ. ಪಾತ್ರಕ್ಕೆ ನ್ಯಾಯ ಒದಗಿಸುವುದು ನನ್ನ ಕಾಯಕ.

◆ **ಜೀವನಶೈಲಿ ಹೇಗಿದೆ?**

ಜಿಮ್‌ಗೆ ಹೋಗುತ್ತೇನೆ. ನಿತ್ಯವೂ ತಾಲೀಮು ಮಾಡುವುದು ಅಭ್ಯಾಸ ಆಗಿದೆ. ಬೆಳಿಗ್ಗೆ ತಪ್ಪಿದರೆ ಸಂಜೆ ಕಡ್ಡಾಯವಾಗಿ ಹೋಗುವೆ. ಕೆಲವೊಮ್ಮೆ ಕೆಲಸದ ಕಾಣಕ್ಕೆ ಹೋಗಲು ಆಗುವುದಿಲ್ಲ. ಅದು ಅಪರೂಪ. ಊಟೋಪಚಾರದಲ್ಲಿಯೂ ಮನೆ ಊಟಕ್ಕೆ ಆದ್ಯತೆ ನೀಡುತ್ತೇನೆ. ಡ್ರೈ ಫ್ರೂಟ್ಸ್ ಮತ್ತು ಹಣ್ಣುಗಳನ್ನು ನಿತ್ಯವೂ ಬಳಸುತ್ತೇನೆ. ಮಾಂಸಾಹಾರವನ್ನೂ ಇಷ್ಟಪಡುತ್ತೇನೆ. ಹೆಚ್ಚಾಗಿ ಚಿಕನ್ ಆಯ್ಕೆ ನನ್ನದು. ಏನೇ ಆಗಿದ್ದರೂ ಮಿತವಾಗಿ ಸೇವಿಸುವುದು ನನ್ನ ರೂಢಿ. ಕೆಲವೊಮ್ಮೆ ಸ್ನೇಹಿತರ ಜೊತೆ ಹೊರ ಹೋದಾಗ ಡಯಟ್ ಮಿಸ್ ಮಾಡಿ ಪೀಜಾ– ಬರ್ಗರ್ ತಿನ್ನುತ್ತೇನೆ.

■ **ರಾಘವೇಂದ್ರ ಕೆ.**